# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ

## ಸ್ಪೆಷಲ್ ಕೇಸ್ ನಂ. 7/2015

**ದೋ.ಸಾ. : 19 ಪ್ರಾ.ಸಾ. : 12**

ಸಾಕ್ಷಿಯ ಹೆಸರು : ಉಮಾಪ್ರಶಾಂತ
ಗಂಡನ ಹೆಸರು : ಪ್ರಶಾಂತಕುಮಾರ ಎಸ್.ಬಿ.
ವಯಸ್ಸು : 41 ವರ್ಷ
ಉದ್ಯೋಗ : ಆರಕ್ಷಕ ಅಧೀಕ್ಷಕರು
ವಾಸ : ದಾವಣಗೆರೆ

**ದಿನಾಂಕಃ 15-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ದಿನಾಂಕ 31.10.2014 ರಿಂದ 17.05.2016 ರವರೆಗೆ ಕರ್ನಾಟಕ ಲೋಕಾಯುಕ್ತ ಕಾರವಾರದಲ್ಲಿ ಆರಕ್ಷಕ ಉಪಾಧೀಕ್ಷಕಳಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಸದರಿ ಠಾಣೆಯ ಮೊಕದ್ದಮೆ ಸಂ. 5/2013 ರಲ್ಲಿ ದಿನಾಂಕ 26.11.2014 ರಂದು ಹಿಂದಿನ ಉಪಾಧೀಕ್ಷಕರಾದ ದೋಸಾ-18 ರವರು ವರ್ಗಾವಣೆಯಾಗಿದ್ದರಿಂದ ಕಡತವನ್ನು ಮುಂದಿನ ತನಿಖೆಗೆ ವಹಿಸಿಕೊಂಡಿರುತ್ತೇನೆ. ದಿನಾಂಕ 20.01.2015 ರಂದು ನಾನು ನಮ್ಮ ಮೇಲಾಧಿಕಾರಿಯವರ ಮೂಲಕ ಆರೋಪಿ ವಿರುದ್ಧ ಅಭಿಯೋಜನಾ ಮಂಜೂರಾತಿ ಪತ್ರವನ್ನು ಪಡೆದಿರುತ್ತೇನೆ. ನಾನು ಅದನ್ನು ನೋಡಿದರೆ ಗುರುತಿಸುತ್ತೇನೆ. ಈಗ ವಿ.ಸಿ. ಮೂಲಕ ನನಗೆ ಕಾಣಿಸಿರುವ ದಾಖಲಾತಿ ಸದರಿ ಅಭಿಯೋಜನಾ ಮಂಜೂರಾತಿ ಪತ್ರ ಮತ್ತು ಅದಕ್ಕೆ ಸಂಬಂಧಿಸಿದ ಜ್ಞಾಪನ ಆಗಿದೆ. ಸದರಿ ಜ್ಞಾಪನವನ್ನು ನಿ.ಪಿ. 43 ಎಂದು ಗುರುತಿಸಲಾಯಿತು. ಅಭಿಯೋಜನಾ ಮಂಜೂರಾತಿ ಪತ್ರವನ್ನು ನಿ.ಪಿ. 43/1 ಎಂದು ಗುರುತಿಸಲಾಯಿತು. ದಿನಾಂಕ 07.02.2015 ರಂದು ಪ್ರಕರಣದ ತನಿಖೆ ಮುಗಿದಿದ್ದರಿಂದ ಮತ್ತು ಲಭ್ಯ ಸಾಕ್ಷ್ಯದಿಂದ ಶ್ರೀ ಗಣೇಶ ಅನಂತ ನಾಯ್ಕ ಸಹಾಯಕ ನಿರ್ದೇಶಕರು , ಅಕ್ಷರ ದಾಸೋಹ, ತಾಲೂಕು ಪಂಚಾಯತಿರವರ ವಿರುದ್ಧ ಆರೋಪ ಮೇಲ್ನೋಟಕ್ಕೆ ಸಾಬೀತು ಆಗಿದ್ದರಿಂದ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್ ವಿ ಎನ್ ರವರಿಂದ**

2. ಅಭಿಯೋಜನಾ ಮಂಜೂರಾತಿಯನ್ನು ನಾನು ಒತ್ತಡ ಹಾಕಿ ಪಡೆದಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಿರಪರಾಧಿ ಎಂದು ಗೊತ್ತಿದ್ದರೂ ನಾನು ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಲು ಸಾಕಷ್ಟು ಸಾಕ್ಷ್ಯ ಪುರಾವೆ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ದಸ್ತಗಿರಿ ಮಾಡಿದ ಮೇಲೆ ಪ್ರವಾಸಿ ಮಂದಿರದಲ್ಲಿ ಪಂಚನಾಮೆ ಮಾಡಲು ಏಕೆ ಅಷ್ಟು ಸುದೀರ್ಘ ಸಮಯ ತೆಗೆದುಕೊಂಡರು ಎಂದು ನಾನು ಕೇಳಿದ್ದೆನಾ ಎಂದರೆ ಈ ಪ್ರಕರಣದಲ್ಲಿ ಸುದೀರ್ಘ ಪ್ರಕ್ರಿಯೆ ಇರುವುದರಿಂದ ಸ್ವಲ್ಪ ಕಾಲಾವಕಾಶ ಹಿಡಿದಿರುತ್ತದೆ . ಲೋಕಾಯುಕ್ತ ಪೊಲೀಸ್ ನವರು ದಿನಾಂಕ 16.09.2013 ರಂದು ಕುಮಟಾಕ್ಕೆ ಸಂಜೆ 6.15 ಗಂಟೆಗೆ ಆರೋಪಿ ಕಚೇರಿ ಬಳಿ ಬಂದ ಮೇಲೆ ಆರೋಪಿಯನ್ನು ಎಷ್ಟು ಗಂಟೆಗೆ ದೇವಸ್ಥಾನದ ಬಳಿ ದಸ್ತಗಿರಿ ಮಾಡಿದರು ಎಂದರೆ ಅದೇ ದಿನ ರಾತ್ರಿ 8.40 ಗಂಟೆಗೆ ವಶಕ್ಕೆ ಪಡೆದುಕೊಂಡಿರುವುದಾಗಿ ತನಿಖಾಧಿಕಾರಿಯವರು ನಮೂದಿಸಿದ್ದಾರೆ. ನಮ್ಮ ಪೊಲೀಸ್ ನವರು ಎಷ್ಟು ಗಂಟೆಗೆ ಆರೋಪಿಯನ್ನು ಹಿಂಬಾಲಿಸಲು ಪ್ರಾರಂಭಿಸಿದರು ಎಂದು ಕಡತದಲ್ಲಿ ನಮೂದು ಇರುವುದಿಲ್ಲ ಆದ್ದರಿಂದ ನಾನು ಅದನ್ನು ಹೇಳಲು ಆಗುವುದಿಲ್ಲ. ಸಂಜೆ 6.15 ರಿಂದ 8.40 ರವರಿಗೆ ಆರೋಪಿಯನ್ನು ವಶಕ್ಕೆ ಪಡೆಯುವ ತನಕ ಯಾವ ಯಾವ ಜಾಗಗಳಲ್ಲಿ ಆರೋಪಿಯನ್ನು ಪೊಲೀಸ್ ನವರು ಬೆನ್ನೆಟ್ಟಿ ಹೋಗಿದ್ದರು ಎಂದು ನಾನು ತಿಳಿದುಕೊಂಡಿಲ್ಲ. ಆರೋಪಿಯನ್ನು ಹಿಡಿಯಲು ಅಷ್ಟು ಸುದೀರ್ಘ ಅವಧಿ ಏಕೆ ಹಿಡಿಯಿತು ಎಂದು ನಾನು ವಿಚಾರಿಸಿಲ್ಲ. ನನ್ನ ತನಿಖೆಯಲ್ಲಿ ಆರೋಪಿ ವಿರುದ್ಧ ಅಪರಾಧ ಸಾಬೀತಾಗುವಂತಹ ಯಾವುದೇ ಪುರಾವೆ ಸಿಕ್ಕಿಲ್ಲ ಎಂದು ಗೊತ್ತಾಗಿದೆ ಎಂದರೆ ಸರಿಯಲ್ಲ. ನನ್ನ ತನಿಖೆಯಲ್ಲಿ ಆರೋಪಿಯಿಂದ ಯಾವುದೇ ನೋಟುಗಳನ್ನು ವಶಪಡಿಸಿಕೊಂಡಿಲ್ಲ ಎಂದು ಮನದಟ್ಟಾಗಿದೆ ಎಂದರೆ ಸರಿಯಲ್ಲ. ಪ್ರವಾಸಿ ಮಂದಿರದಿಂದ ತಾಲೂಕು ಪಂಚಾಯತಿ ಕಚೇರಿಗೆ ಯಾರು ಯಾರು ಸಿಬ್ಬಂದಿ ಮತ್ತು ಇತರರು ಹೋಗಿದ್ದರು ಎಂದು ನಾನು ಮಾಹಿತಿ ಪಡೆದಿಲ್ಲ ಕಾರಣ ಆ ಭಾಗದ ತನಿಖೆಯಾದಾಗ ನಾನು ಅಲ್ಲಿ ಇರಲಿಲ್ಲ. ಇಂತಹ ವಿವಾದಾತ್ಮಕ ಮತ್ತು ಸಂಶಯಾತ್ಮಕ ವಿಚಾರಗಳನ್ನು ಬಗೆಹರಿಸಿಕೊಳ್ಳದೇ ನಾನು ಗಡಿಬಿಡಿಯಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ

ಸರಿಯಲ್ಲ. ನನ್ನ ತನಿಖೆಯಲಿಲ ಫಿರ್ಯಾದಿಯ ಅಕ್ರಮ ಚಟುವಟಿಕೆಗೆ ಆರೋಪಿ ಸಹಕಾರ ನೀಡದೇ ಇದ್ದ ಕಾರಣ ಆರೋಪಿ ವಿರುದ್ಧ ಸುಳ್ಳು ದೂರನ್ನು ಫಿರ್ಯಾದಿ ನೀಡಿದ್ದಾನೆ ಎಂದು ಕಂಡು ಬಂದಿದೆ ಎಂದರೆ ಸರಿಯಲ್ಲ. ದೋಷಾರೋಪಣಾ ಪಟ್ಟಿ ಸಲ್ಲಿಸುವಾಗ ನಾನು ಯಾವುದೇ ಕಾಗದ ಪತ್ರಗಳನ್ನು ಪರಿಶೀಲಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ನಿರಪರಾಧಿ ಎಂದು ಗೊತ್ತಿದ್ದರೂ ನಾನು ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ